**ಓ.ಎಸ್. ನಂಃ 234/2017**

**ಡಿ.ಡಬ್ಲ್ಯೂಃ 1**

**ದಿನಾಂಕ 11.06.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಪಿ.ಡಿ ವಕೀಲರಿಂದಃ</u>**

1. ದಾವಾ ಆಸ್ತಿಯು ಮೂಲತಃ ವಾದಿ ಮತ್ತು 1 ನೇ ಪ್ರತಿವಾದಿಯ ತಂದೆಯಾದ ಪುಟ್ಟಪ್ಪ ರವರಿಗೆ ಸೇರಿತ್ತು ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿಯ ತಂದೆಯಾದ ಪುಟ್ಟಪ್ಪ ರವರು ಮರಣ ಹೊಂದಿದ ಬಳಿಕ ದಾವಾ ಆಸ್ತಿಯು ಪುಟ್ಟಪ್ಪ ರವರ ಹೆಂಡತಿಯಾದ ಹಾಗೂ ವಾದಿ ಮತ್ತು 1 ನೇ ಪ್ರತಿವಾದಿಯ ತಾಯಿಯಾದ ನಂಜಮ್ಮ ರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ.

2. ವಾದಿ ಮತ್ತು 1 ನೇ ಪ್ರತಿವಾದಿಯ ತಾಯಿಯಾದ ನಂಜಮ್ಮ ರವರು 1 ನೇ ಪ್ರತಿವಾದಿಯೊಂದಿಗೆ ವಾಸವಿದ್ದರು ಎಂದರೆ ಸರಿ. ವಾದಿಯ ವಿವಾಹವು ಹೊಳೆನರಸೀಪುರ ತಾಲೂಕಿನ ತೇಜೂರು ಮಾಯಗೌಡನಹಳ್ಳಿ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ವಾದಿ ಮತ್ತು 1 ನೇ ಪ್ರತಿವಾದಿಯ ತಂದೆಯಾದ ಪುಟ್ಟಪ್ಪ ರವರ ಆಸ್ತಿಯಾಗಿರುವ ಕಾರಣ ವಾದಿಯೂ ಸಹ ದಾವಾ ಆಸ್ತಿಯ ಹಕ್ಕುದಾರಳಾಗಿರುತ್ತಾರೆ ಎಂದರೆ ಸರಿ.

3. ನಿಪಿ-2 ರ ಕ್ರಯಪತ್ರಕ್ಕೆ ವಾದಿಯ ಸಹಿಯನ್ನು ಪಡೆದಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ-2 ರ ಕ್ರಯಪತ್ರ ಆಗುವ ಕಾಲಕ್ಕೆ ವಾದಿಯ ಸಹಿ ಪಡೆಯಬೇಕು ಎನ್ನುವ ಕಾನೂನು ಇರಲಿಲ್ಲ ಎಂದು ನುಡಿದಿರುತ್ತಾರೆ. ವಾದಿಯ ತಾಯಿಯಾದ ನಂಜಮ್ಮ ರವರು ದಿನಾಂಕಃ12.04.2015 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ.

4. ದಾವಾ ಆಸ್ತಿಯ ಖಾತೆಯನ್ನು 3 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು 3 ನೇ ಪ್ರತಿವಾದಿಯು ತಹಸೀಲ್ದಾರ್ ರವರಿಗೆ ಅರ್ಜಿಯನ್ನು ಸಲ್ಲಿಸಿದ್ದಾಗ, ದಾವಾ ಆಸ್ತಿಯ ಖಾತೆಯನ್ನು 3 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡದಂತೆ ವಾದಿಯು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ದಾವಾ ಆಸ್ತಿಯ ಖಾತೆಯನ್ನು 3 ನೇ ಪ್ರತಿವಾದಿಯು ತನ್ನ ಹೆಸರಿಗೆ ಖಾತೆ ವರ್ಗಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದಾಗ ದಾವಾ ಆಸ್ತಿಯನ್ನು ನಿಮಗೆ ಮಾರಾಟ ಮಾಡಿರುವ

ವಿಷಯ ವಾದಿಗೆ ತಿಳಿದು ಬಂದಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯನ್ನು ವಾದಿ, 1 ನೇ ಪ್ರತಿವಾದಿ ಹಾಗೂ ಅವರ ತಾಯಿಯಾದ ನಂಜಮ್ಮ ರವರು ಜೊತೆಯಾಗಿ ಗ್ರಾಮಸ್ಥರ ಸಮಕ್ಷಮದಲ್ಲಿ ನನಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

5. ವಾದಿಯು ವಿವಾಹವಾಗಿ ಬೇರೆ ಊರಿನಲ್ಲಿರುವ ತಮ್ಮ ಗಂಡನ ಮನೆಯಲ್ಲಿ ಇದ್ದ ಕಾರಣ ಅವರಿಗೆ ಗೊತ್ತಿರದ ಹಾಗೆ ಕೇವಲ 1 ನೇ ಪ್ರತಿವಾದಿ ಮತ್ತು ನಂಜಮ್ಮ ರವರು ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವಾ ಆಸ್ತಿಯನ್ನು ವಾದಿ, 1 ನೇ ಪ್ರತಿವಾದಿ ಹಾಗೂ ಅವರ ತಾಯಿಯಾದ ನಂಜಮ್ಮ ರವರು ಜೊತೆಯಾಗಿ ನನಗೆ ಮಾರಾಟ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗೆ ಪಾಲು ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನಾನು, 1 ನೇ ಪ್ರತಿವಾದಿ ಹಾಗೂ ಅವರ ತಾಯಿಯಾದ ನಂಜಮ್ಮ ರವರು ಶಾಮೀಲಾಗಿ ದಾವಾ ಆಸ್ತಿಯ ಮಾರಾಟದ ವ್ಯವಹಾರವನ್ನು ನಡೆಸಿರುತ್ತೇವೆ ಎಂದರೆ ಸರಿಯಲ್ಲ.

6. ವಾದಿಯ ಪಾಲಿನ ಹಣವನ್ನು ವಾದಿಗೆ ಕೊಟ್ಟಿರುವುದಾಗಿ ನಿಪಿ-2 ರಲ್ಲಿ ನಾವು ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ನಾವು ನಿಪಿ-2 ರಲ್ಲಿ ಹೇಳಿದ ಹಾಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಕ್ರಯ ಪತ್ರವು ವಾದಿಯ ದಾವಾ ಆಸ್ತಿಯ ಮೇಲಿನಹಕ್ಕಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ನಿಪಿ-2 ರ ದಾಖಲೆಯ ಆಧಾರದ ಮೇರೆಗೆ ನಾನು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ 3 ನೇ 1 ಭಾಗ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**